# ಆ್ಯಂಡ್ರಾಯ್ಡ್ 16: ‘ಬೀಟಾ’ ಬಿಡುಗಡೆ



**ಬಹು ಬಳಕೆಯಲ್ಲಿರುವ ಗೂಗಲ್‌ನ ಆ್ಯಂಡ್ರಾಯ್ಡ್ ಕಾರ್ಯಾಚರಣ ವ್ಯವಸ್ಥೆಯು (ಒಎಸ್) ಹೊಸತನದತ್ತ ಹೊರಳುತ್ತಿದ್ದು, ಅದರ ಪರೀಕ್ಷಾರ್ಥ ಬೀಟಾ ಆವೃತ್ತಿಯು ಈಚೆಗಷ್ಟೇ ಬಿಡುಗಡೆಯಾಗಿದೆ.**

■ **ಶಶಿಕುಮಾರ್ ಸಿ.**

ಆ್ಯಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಹೊಸತನ ತರಲು ಮುಂದಾಗಿರುವ ಗೂಗಲ್, ಆ್ಯಂಡ್ರಾಯ್ಡ್ 16 ಬೀಟಾ ಆವೃತ್ತಿಯನ್ನು ಈಚೆಗೆ ಬಿಡುಗಡೆ ಮಾಡಿದೆ. ಮೊಬೈಲ್ ಟೆಕ್ ವಲಯದಲ್ಲಿ ಆಗುತ್ತಿರುವ ಪರಿಣಾಮಕಾರಿ ಬದಲಾವಣೆಗಳಿಗೆ ಪ್ರಬಲ ಪ್ರತಿಸ್ಪರ್ಧೆಯೊಡ್ಡಲು ಗೂಗಲ್ ‘ಆ್ಯಂಡ್ರಾಯ್ಡ್ 16’ರ ಹಾದಿಯನ್ನು ತುಳಿದಿದೆ.

ಈಚೆಗೆ ಗೂಗಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರ್ ಪಿಚೈ, ಮೊಬೈಲ್ ಆಪರೇಟಿಂಗ್ ಸಿಸ್ಟಮ್ ಆದ ಆ್ಯಂಡ್ರಾಯ್ಡ್ 16ರ ಇಣುಕು ನೋಟವನ್ನು ವಾರ್ಷಿಕ ಡೆವಲಪರ್‌ಗಳ ಸಮ್ಮೇಳನದಲ್ಲಿ ಹಂಚಿಕೊಂಡಿದ್ದರು. ಇದೇ ವೇಳೆ ಗೂಗಲ್ ತನ್ನ ಕೃತಕ ಬುದ್ಧಿಮತ್ತೆ ಆಧರಿತ ಫೀಚರ್‌ಗಳಾದ ‘ಸರ್ಚ್ ಫೀಚರ್’ ಮತ್ತು ಜೆಮಿನಿ ಎಐನ ಹೊಸ ಫೀಚರ್‌ಗಳನ್ನು ಪರಿಚಯಿಸಿತ್ತು.

ಈಗ ಆ್ಯಂಡ್ರಾಯ್ಡ್ 16ರ ಆಪರೇಟಿಂಗ್ ಸಿಸ್ಟಂ ಅನ್ನು ಹಲವು ಬದಲಾವಣೆಗಳೊಂದಿಗೆ ಬೀಟಾ ಆವೃತ್ತಿಯಲ್ಲಿ ಕಾಣಬಹುದಾಗಿದೆ. ಇದರಲ್ಲಿ ಮೊಬೈಲ್ ಇಂಟರ್‌ಫೇಸ್ ಮತ್ತು ವಿನ್ಯಾಸದಲ್ಲೂ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಈ ಆಪರೇಟಿಂಗ್ ಸಿಸ್ಟಂನ ಪರಿಷ್ಕೃತ ಆವೃತ್ತಿಯು ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಪ್ರಸ್ತುತ ಅದರ ‘ಕ್ಯುಪಿಆರ್ ಬೀಟಾ’ (ಕ್ವಾರ್ಟರ್ಲಿ ಪ್ಲಾಟ್‌ಫಾರ್ಮ್ ರಿಲೀಸಸ್) ಆವೃತ್ತಿ ಪಿಕ್ಸೆಲ್ ಸಾಧನಗಳಲ್ಲಿ ಮಾತ್ರ ಲಭ್ಯವಾಗಲಿದೆ.




### 16ರಲ್ಲಿ ಏನೆಲ್ಲ ಇರಲಿದೆ?

ಆ್ಯಂಡ್ರಾಯ್ಡ್ 16ರ ವಿನ್ಯಾಸದಿಂದ ಹಿಡಿದು ಅದರ ಗೌಪ್ಯ ಫೀಚರ್‌ಗಳವರೆಗೆ ಸಮಗ್ರವಾಗಿ ಎಲ್ಲವನ್ನೂ ಅಪ್‌ಗ್ರೇಡ್ ಮಾಡಲಾಗಿದ್ದು, ಬಳಕೆಸ್ನೇಹಿಯಾಗಿಸಲಾಗಿದೆ. ಈ ಆವೃತ್ತಿಯಲ್ಲಿ ಹೊಸ ಮೆಟೀರಿಯಲ್ 3 ಎಕ್ಸ್‌ಪ್ರೆಸಿವ್ ಅನಿಮೇಷನ್ ತಂತ್ರಜ್ಞಾನವನ್ನು ಪರಿಚಯಿಸಿರುವುದು ವಿಶೇಷ.

‘ನೀವು ಈ ಬದಲಾವಣೆಯನ್ನು ಅದರ ನೋಟಿಫಿಕೇಷನ್‌ನಲ್ಲಿ ನೋಡುತ್ತೀರಿ. ಕಂಪನಿಯು ಅನೇಕ ಐಕಾನ್‌ಗಳನ್ನು ಸಹ ಬದಲಾಯಿಸಿದೆ. ಸ್ಲೈಡ್ ಮಾಡುವಾಗ ಹಿನ್ನೆಲೆ ಮಸುಕಾಗುತ್ತದೆ. ಅಲ್ಲದೆ, ಐಕಾನ್‌ನ ಡೆಪ್ತ್ ಅನ್ನು ಅದರಲ್ಲಿ ಕಾಣಬಹುದು. ಇದರಿಂದ ಸ್ಲೈಡ್ ಮಾಡಿದ ನಂತರವೂ, ನೀವು ಹಿನ್ನೆಲೆಯಲ್ಲಿ ಯಾವ ಅಪ್ಲಿಕೇಷನ್ ಆನ್ ಮಾಡಿದ್ದೀರಿ ಅನ್ನೋದನ್ನು ತೋರುತ್ತದೆ. ಹೀಗೆ ಹಲವಾರು ಫೀಚರ್‌ಗಳ ಗೊಂಚಲನ್ನು ಈ ಆವೃತ್ತಿಯಲ್ಲಿ ಒದಗಿಸಲಾಗಿದೆ ಎಂದು ಗೂಗಲ್‌ನ ಬ್ಲಾಗ್ ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ.

### ಕಲರ್ ಥೀಮ್ ಸಹ ರಿಫ್ರೆಶ್

ಅಪ್‌ಗ್ರೇಡ್ ಆದ ಆವೃತ್ತಿಯಲ್ಲಿ ಬಣ್ಣದ ಥೀಮ್‌ಗಳಿಗೆ ವಿಶೇಷ ಒತ್ತು ನೀಡಲಾಗಿದೆ. ಕಲರ್ ಥೀಮ್‌ನಲ್ಲಿ ಅಪ್‌ಗ್ರೇಡ್ ಮಾಡಲಾಗಿದ್ದು, ಗೂಗಲ್ ಇದಕ್ಕೆ ಹೆಚ್ಚಿನ ಕ್ರಿಯಾತ್ಮಕ ಬಣ್ಣಗಳನ್ನು ಸೇರಿಸಿ ಇಡೀ ಕಾರ್ಯಾಚರಣ ವ್ಯವಸ್ಥೆಯನ್ನು ವರ್ಣಮಯಗೊಳಿಸಿದೆ.

ಸೆಟ್ಟಿಂಗ್‌ಗಳನ್ನು ಕಸ್ಟಮೈಸ್ ಮಾಡುವ ಆಯ್ಕೆಯನ್ನು ಕಲ್ಪಿಸಲಾಗಿದೆ. ಆಯ್ದ ಅಪ್ಲಿಕೇಷನ್‌ಗಳಿಗೆ ನೋಟಿಫಿಕೇಷನ್ ಟ್ರ್ಯಾಕಿಂಗ್ ಫೀಚರ್ ಒದಗಿಸಲಾಗಿದ್ದು, ಇದು ಮೊಬೈಲ್‌ಗೆ ಬರುವ ಎಲ್ಲ ರೀತಿಯ ನೋಟಿಫಿಕೇಷನ್ ಬಗ್ಗೆ ಬಳಕೆದಾರರಿಗೆ ಎಚ್ಚರಿಸುತ್ತದೆ.

ಹಿಂದಿನ ಆಪರೇಟಿಂಗ್ ಸಿಸ್ಟಮ್‌ಗಿಂತ ಉತ್ತಮ ಗೌಪ್ಯ ಫೀಚರ್‌ಗಳನ್ನು ಆ್ಯಂಡ್ರಾಯ್ಡ್ 16ರಲ್ಲಿ ಕಾಣಬಹುದು. ಇದರಲ್ಲಿ ಬಯೊಮೆಟ್ರಿಕ್ಸ್ ಜೊತೆಗೆ, ಪಾಸ್‌ಕೀ ಮೂಲಕ ಮೊಬೈಲ್‌ಗೆ ಸೈನ್ ಇನ್ ಮಾಡುವ ಆಯ್ಕೆಯನ್ನು ಈ ಬಾರಿ ನೀಡಲಾಗಿದೆ. ಈ ಬಗ್ಗೆ ಹಲವು ತಿಂಗಳ ಹಿಂದೆಯೇ ಗೂಗಲ್ ಮಾಹಿತಿ ಹಂಚಿಕೊಂಡಿತ್ತು. ಇದರೊಟ್ಟಿಗೆ ಒಂದೇ ಸಾಧನದಲ್ಲಿ ಹಲವು ಪ್ರೊಫೈಲ್ ಇಂಟರ್‌ಫೇಸ್‌ಗಳನ್ನು ರಚಿಸಲು ಸಾಧ್ಯವಾಗುವಂತೆ ಅಭಿವೃದ್ಧಿಪಡಿಸಲಾಗಿದೆ.

### ಯಾವೆಲ್ಲಾ ಮೊಬೈಲ್‌ಗಳಲ್ಲಿ ಲಭ್ಯ

ಪಿಕ್ಸೆಲ್ 6, ಪಿಕ್ಸೆಲ್ 6 ಪ್ರೊ, ಪಿಕ್ಸೆಲ್ 6ಎ, ಪಿಕ್ಸೆಲ್ 7, ಪಿಕ್ಸೆಲ್ 7 ಪ್ರೊ, ಪಿಕ್ಸೆಲ್ 7ಎ, ಪಿಕ್ಸೆಲ್ ಫೋಲ್ಡ್, ಪಿಕ್ಸೆಲ್ ಟ್ಯಾಬ್ಲೆಟ್, ಪಿಕ್ಸೆಲ್ 8, ಪಿಕ್ಸೆಲ್ 8 ಪ್ರೊ, ಪಿಕ್ಸೆಲ್ 8ಎ, ಪಿಕ್ಸೆಲ್ 9, ಪಿಕ್ಸೆಲ್ 9 ಪ್ರೊ, ಪಿಕ್ಸೆಲ್ 9 ಪ್ರೊ ಎಕ್ಸ್‌ಎಲ್, ಪಿಕ್ಸೆಲ್ 9 ಪ್ರೊ ಫೋಲ್ಡ್, ಪಿಕ್ಸೆಲ್ 9ಎ. ■

### ಡೌನ್‌ಲೋಡ್ ಹೇಗೆ?

ಆ್ಯಂಡ್ರಾಯ್ಡ್ 16ರ ಬೀಟಾ ಆವೃತ್ತಿಯು ಗೂಗಲ್ ಪಿಕ್ಸೆಲ್ ಸ್ಮಾರ್ಟ್‌ಫೋನ್‌ಗಳಿಗೆ ಮಾತ್ರ ಲಭ್ಯವಿದ್ದು, ಇದನ್ನು ಡೌನ್‌ಲೋಡ್ ಮಾಡಲು ಗೂಗಲ್ ಆ್ಯಂಡ್ರಾಯ್ಡ್ ಬೀಟಾ ಪ್ರೋಗ್ರಾಂನಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ನೋಂದಾವಣೆ ನಂತರ ಬಳಕೆದಾರರು ಫೋನ್ ಸೆಟ್ಟಿಂಗ್ಸ್‌ಗೆ ಹೋಗಿ ಹೊಸ ಆವೃತ್ತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೊಸ ಆವೃತ್ತಿಯ ಗಾತ್ರ 2.91GB ಆಗಿದ್ದು, ಡೌನ್‌ಲೋಡ್ ಮಾಡಲು ವೇಗದ ಇಂಟರ್ನೆಟ್ ಹಾಗೂ ಬ್ಯಾಟರಿ ಚಾರ್ಜ್ ಬಗ್ಗೆ ಗಮನವಹಿಸಬೇಕು.

ಬೀಟಾ ಪ್ರೋಗ್ರಾಂಗೆ ದಾಖಲಾದ ನಂತರ, ನಿಗದಿತ ಸಮಯ ಮುಗಿದ ನಂತರವೇ ಅದರಿಂದ ಬಳಕೆದಾರರು ನಿರ್ಗಮಿಸಬಹುದು. ಬೀಟಾ ಪ್ರೋಗ್ರಾಂ ಅನ್ನು ತೊರೆದ ನಂತರ, ಸ್ಥಿರ ಆವೃತ್ತಿಯನ್ನು ಡೌನ್‌ಲೋಡ್ ಮಾಡಲು ಬಳಕೆದಾರರು ತಮ್ಮ ಸಾಧನವನ್ನು ಬ್ಯಾಕಪ್ ಮಾಡಬೇಕಾಗುತ್ತದೆ.